ಮನೆಯವರು ಸುಮ್ಮನೆ ಕಿಟಕಿ ಮರೆಯಲ್ಲಿ ನೋಡಿ ಲೈಟ್ ಆಫ್ ಮಾಡಿಕೊಂಡಿದ್ದರು. ಆತ ಬಹಳ ಪುಕ್ಕಲ. ನಾನು ಸತ್ತರೂ ತನ್ನ ಹೆಂಡತಿ ಸಾಯಬಾರದು ಎಂದು ಇಡೀ ರಾತ್ರಿ ಎಚ್ಚರವಾಗಿದ್ದ. ನಿದ್ದೆ ಬಂದಂತೆ ನಟಿಸುತ್ತಿದ್ದ. ಅವನ ಹೆಂಡತಿ ಹೆದರಿಸಲು ಹಿಟ್ಟಿನ ದೊಣ್ಣೆಯನ್ನು ದಿಂಬಿನ ಕೆಳಗೆ ಇಟ್ಟುಕೊಂಡು ಆ ನಟ್ಟಿರುಳಲ್ಲಿ ಗಂಡನಿಗೆ ಬೆದರಿಸುತ್ತಿದ್ದಳು. ಈಗ ಸದ್ದಿಲ್ಲ. ಕಲ್ಲು ನೀರು ಕರಗುವ ಹೊತ್ತಂತೆ! ಹೆಂಡತಿ ಗೊರಕೆ ಹೊಡೆಯುತ್ತಿದ್ದಳು.

ಬೆಳಗಾಗುತ್ತಿದೆ ಎಂದು ಮುಂಚಿತವಾಗಿ ಬೆಳದಿಂಗಳಲ್ಲಿ ಎದ್ದು ಯಾವತ್ತಿನಂತೆಯೇ ಬಾಗಿಲು ಬೀಗ ತೆಗೆದು ಗೇಟು ದಾಟಿ ವಾಕಿಂಗ್‌ಗೆ ಹೊರಟ. ಅದವನ ರೂಢಿ. ನಗರಕ್ಕೆ ಹಗಲಿರುಳಿನ ವ್ಯತ್ಯಾಸವಿರಲಿಲ್ಲ. ಅದು ಏನೇನೋ ಗೋಪ್ಯವಾಗಿ ಮಾಡುತ್ತಿತ್ತು. ಮುಳುಗುತ್ತಿದ್ದ ಚಂದಿರ. ಅದೇ ಸೂರ್ಯೋದಯ ಎನಿಸಿತ್ತು ಅವನಿಗೆ... ವಾಕಿಂಗ್ ಮಾಡಿ ಬೆವೆತ ಆ ತಣ್ಣನೆಯ ರಾತ್ರಿಯಲ್ಲೂ... ಬೆಟ್ಟಗುಡ್ಡ ಬಯಲು ಕಣಿವೆಗಳನ್ನೆಲ್ಲ ಬಳಸಿ ರಾತ್ರಿ ವೇಳೆ ನಗರಕ್ಕೆ ಬೇಕಾದಂತೆ ಭೂಮಿತಾಯಿಯ ರೌದ್ರವ ಯಂತ್ರಗಳು ಕಡಿದುರುಳಿಸಿ ಮಾನವ ವಸತಿಗೆ ಬೇಕಾದಂತೆ ಮಾರ್ಪಾಟು ಮಾಡುತ್ತಿದ್ದವು. ಭೂದೇವಿ ಯಾವಾಗಿ ನಡುಗಿ ಮೈ ಕೊಡವುತ್ತಾಳೋ ಏನೋ... ಆಗ ಯಾವ ನಗರಗಳೂ ನಿಲ್ಲಲಾರವು ಎಂದು ಆ ಸಭ್ಯ; ತಪ್ಪಾಗಿ ಬೇಗ ಬಂದೆನೆಂದು ಅಲ್ಲೊಂದು ಅರಳಿ ಮರದ ಕೆಳಗೆ ಕೂತು ಇಳಿಜಾರಿನ ಆ ಬಟಾಬಯಲ ದಿಟ್ಟಿಸಿದ. ದಿಗಂತದ ತನಕ ಭೂದಾಹ ಹಬ್ಬಿದಂತಿತ್ತು. ತಟಕ್ಕನೆ ಎಚ್ಚರಗೊಂಡ. ಯಾರೋ ಹೆಣ್ಣುಮಗಳು 'ಅಣ್ಣಾ' ಎಂದು ಕೂಗಿ ಕರೆದಂತಾಗಿ ಅತ್ತ ಕಿವಿಯರಳಿಸಿದ.

'ಅಣ್ಣಾ, ಬಾರಣ್ಣಾ... ಬಾ... ಬಾರೋ ಅಣ್ಣಾ... ಇಲ್ಲಿ ಸಿಲುಕಿರುವೆ ತಂತಿಬೇಲಿಗೆ ಬಾರಣ್ಣಾ...' ಎಂದು ಆಕೆ ಕ್ಷೀಣ ದನಿಯಲ್ಲಿ ಕಿವಿಗೆ ಬಂದು ಕರೆದಂತೆ ಸದ್ದು ಮಾಡುತ್ತಿದ್ದಳು. ಅವನ ಮಗಳು ಕೂಡ ಅಣ್ಣಾ ಎಂದೇ ಹೆಚ್ಚುಕಡಿಮೆ ಅದೇ ದನಿಯಲ್ಲಿ ಕರೆಯುತ್ತಿದ್ದಳು. ನನ್ನ ಮಗಳ ದನಿಯೇ ಅದು ಎಂದು ಆತ ಜೋರಾಗಿ ಕೂಗಿದ. ಯಾವ ಮೂಲೆಯಲ್ಲಿ ಎಲ್ಲಿರುವೆ... ಎಲ್ಲೂ ಏನೂ ಕಾಣುತ್ತಿಲ್ಲ. ನಿನ್ನ ದನಿಯಂತೂ ಸುತ್ತೆಲ್ಲಾ ಇದೆಯಲ್ಲ... ಗುರುತು ಹೇಳು ಬರುವೆ ಎಂದು ಹತಾಶೆಯಲ್ಲಿ ಒಣಗಿ ನಡುಗುವ ಸದ್ದಿನಲ್ಲಿ ಕರೆದ. ಎಲ್ಲೆಲ್ಲೂ ಜಾಹೀರಾತಿನ ಬೋರ್ಡುಗಳು; ತಂತಿ ಬೇಲಿಗಳು... ಅಸ್ಪಷ್ಟ ರಾತ್ರಿ ಸೆಕ್ಯೂರಿಟಿಗಳು ವಿಷಲ್ ಮಾಡಿ ಬೆದರಿಸುತ್ತಿದ್ದರು. ಕಿತ್ತು ತಿನ್ನುವ ನಾಯಿಗಳು ಅವರ ಕೈಗಳಲ್ಲಿದ್ದವು. ಮಂದ ಬೆಳಕಿನ ಅವನ ಬ್ಯಾಟರಿ ಮಿಣುಕುಹುಳುವಿನಂತೆ ಕಾಣುತ್ತಿತ್ತು. ಆ ಬಟಾಬಯಲು ಈಗ ಯಾವುದ್ಯಾವುದೋ ಕಂಪನಿಗಳ ಆಸ್ತಿ ಪಾಸ್ತಿ. ತಂತಿ ಬೇಲಿ ದಾಟಿದರೆ ಮತ್ತೊಂದು ಬಲಾಢ್ಯ ತಂತಿ ಬೇಲಿ... ಅದರಾಚೆ ವಿದ್ಯುತ್ ಹರಿಸಿರುವ ತಂತಿ ಬೇಲಿ... 'ಅಣ್ಣಾ... ಹಿಂದೆ ಈ ಕಡೆ ನೋಡಣ್ಣಾ' ಎಂದಂತಾಯಿತು. ಅಲ್ಲೇನೋ ತಂತಿ ಬೇಲಿಯಲ್ಲಿ ಹರಿದ ಗಾಳಿಪಟ ಸಿಲುಕಿ ಪಟಪಟಿಸುತ್ತಿತ್ತು.

ಎಲ್ಲೆಡೆ ಅದೇ ನೊಂದು ನರಳುವ ದನಿ. ದೇವರೇ ದಾರಿ ತೋರು ಈ ಕತ್ತಲಲ್ಲಿ ಎಂದು ಬಟಾಬಯಲನ್ನೆಲ್ಲ ದಿಟ್ಟಿಸಿ ನೋಡುತ್ತಲೇ ಇದ್ದ. ಬೆನ್ನ ಹಿಂದೆಯೇ ಆ ಅಳಲ ದನಿ ಹಿಂಬಾಲಿಸಿ ಬಂದು ಬೆನ್ನು ಸವರಿದಂತಾಯಿತು. ಛೇ, ಏನಾದರೂ ದೆವ್ವದ ಕಾಟವೇ ಎನಿಸಿ ಇದೆಲ್ಲ ಭ್ರಮೆ ಅಲ್ಲವೇ ಎಂದು ದಿಗಂತದತ್ತ ನೋಡಿದ. ಆ ದಿಗಂತವೋ ಸೂರ್ಯೋದಯದ ಹೆರಿಗೆ ನೋವಲ್ಲಿ ನೆತ್ತರ ಹರಿಸುವಂತೆ ಕೆಂಪಾಗುತ್ತಿತ್ತು. ಬೆಳದಿಂಗಳು ಕರಗಿತ್ತು. ನಾಳೆ ಮತ್ತೆ ಈ ಸದ್ದು ನನ್ನ ಕಿವಿಯ ಮುಟ್ಟದಿರಲಿ ಎಂದು ಹಿಂತಿರುಗಿದ.

ಮುಂಗೋಳಿಗೇ ಎದ್ದು ಮನೆಯ ಹಿಂದೆ ಮುಂದೆ ಸುತ್ತ ಕಸಗುಡಿಸಿ ರಂಗೋಲಿಯನ್ನು ದಿನಚರಿಗೆ ತೊಡಗುವ ಅವಳು; ಈ ಮನುಷ್ಯ ಎಲ್ಲಿ ಎದ್ದು ಹೋದ... ಮಧ್ಯರಾತ್ರಿಯಿಂದಲೂ ಕಾಣುತ್ತಿಲ್ಲವಲ್ಲ ಎಂದು ಗಂಡನಿಗೆ ತರಾಟೆಗೆ ತೆಗೆದುಕೊಂಡಿದ್ದಳು. ಕದ್ದು ಮುಚ್ಚಿ ಯಾವ ನನ್ನ ಸವತಿ ಸೆರಗ ಹಿಡಿದು ಹೋಗಿದ್ದೆಯೋ ದೊಡ್ಡ ಮನುಷ್ಯಾ... ನಿಮ್ಮಂತವರ ಯೋಗ್ಯತೆ ಎಲ್ಲ ಇಷ್ಟೆಯೇ ಎಂದು ಚಹಾ ಕೂಡ ನೀಡದೆ ಉಪಹಾರಕ್ಕೆ ರೆಡಿ ಮಾಡುತ್ತಿದ್ದಳು.

ದಿನಪತ್ರಿಕೆ ಓದುತ್ತ ಚಹಾ ಕುಡಿಯುವುದು ಅವನಿಗೆ ಪರಮಾನಂದ. ಪತ್ರಿಕೆಯ ತುಂಬ ಒಂದಾದರೂ ಮನಸ್ಸಿನ ಕ್ಷೋಭೆಗಳ ತೊಲಗಿಸುವ ಯಾವ ಸುದ್ದಿಯೂ ಇಲ್ಲವಲ್ಲ... ಅಸ್ವಸ್ಥ ಸುದ್ದಿಗಳು... ದುರ್ವಾರ್ತಗಳು... ಪಾತಕೀಯ ವಿವರಗಳು... ಲೂಟಿಕೋರರ ದಿಗ್ವಿಜಯಗಳನ್ನು ಪತ್ರಿಕೆಗಳು ಪ್ರತಿ ದಿನ ಮನಸ್ಸಿಗೆ ಯಾಕೆ ಉಣಬಡಿಸುತ್ತವೋ ದೇವರೇ ಎಂದು ಆ ದಿನದ ಪತ್ರಿಕೆಯನ್ನು ಸಿಟ್ಟಿನಿಂದ ಹರಿದು ಹರಿದು ಬಚ್ಚಲಿಗೆ ಎಸೆದು ಬಂದ. ಹೆಂಡತಿಯ ಸಮಾಧಾನ ಮಾಡುವವನಂತೆ ರಾತ್ರಿ ಉಂಡಿದ್ದ ಪಾತ್ರೆ ಪಗಡಿಗಳನೆಲ್ಲ ತೊಳೆದು, ಮನೆಯ ಕಸಗುಡಿಸಿದ. ಮಾತನಾಡಿಸಲು ಮುನ್ನುಡಿಯಂತೆ ಗಂಟಲು ಸರಿಪಡಿಸಿಕೊಳ್ಳುವ ರೀತಿಯಲ್ಲಿ ಸದ್ದು ಮಾಡಿ ಮುಖ ನೋಡಿದರೂ ಆಕೆ ಕಣ್ಣು ಕೊಡದೆ, ಮಾತನಾಡದೆ, ನನ್ನ ಕೆಲಸ ನಾನು ಮಾಡಿಕೊಳ್ಳುವೆ... ಅತ್ತ ಹೋದರೆ ಸರಿ... ಎಂದು ಗುಟುರು ಹಾಕಿದ ಕೂಡಲೇ; ಓಹೋ... ಈ ರಾತ್ರಿ ತನಗಿದೆ ಮಾರಿಹಬ್ಬ ಎಂದು ಆತ ಸ್ನಾನ ಮುಗಿಸಿ, ಟಿಫನ್‌ಗೂ ಕಾಯದೆ, ಕಚೇರಿಯಲ್ಲಿ ಇಂದು ತುಂಬಾ ಕೆಲಸ ಎಂದು ಹೊರಟು ಹೋಗಿದ್ದ.

ಖಾಸಗಿ ಕಂಪನಿಗಳ ಕೆಲಸವೇ ಹಾಗೆ. ನಿರ್ದಯ ದುಡಿಮೆ. ಇಡೀ ರಾತ್ರಿ ನಿದ್ದೆಗೆಟ್ಟಿದ್ದ. ತೂಕಡಿಕೆ, ಸಂಕಟ, ತಲೆಸುತ್ತು, ವಾಕರಿಕೆ... ಅಸಿಡಿಟಿ. ಅವನಿಗೆ ಯಾರೂ ಅಂತಹ ಆಪ್ತರಿಲ್ಲ. ಒಬ್ಬನೇ ಒಬ್ಬ ಒಳ್ಳೆಯ ಗೆಳೆಯನಿದ್ದ. ಕುಡಿದಾಗ ಕಂಡು ಅಪ್ಪಿಕೊಂಡು ಅಕ್ಕರೆಯಿಂದ ಮಾತಾಡುತ್ತಿದ್ದ. 'ಯಾಕಪ್ಪ ರಜನೀಶ್... ಇವತ್ತು ನಿನ್ನ ಕಣ್ಣಲ್ಲಿ ಬುದ್ಧನ ಕಣ್ಣೀರು... ಒದ್ದೆಯಾಗಿ ಊದಿಕೊಂಡಿವೆ ನಿನ್ನ ಕಣ್ಣು... ನಿನ್ನ ಕಣ್ಣುಗಳು ರಜನೀಶ್ ತರಾನೇ ಇದ್ದವಲ್ಲಾ... ಹಾಗೇ ಉದ್ದ ಉದ್ದ ಗಡ್ಡ ಇದೆಯಲ್ಲ... ಏನಾಯ್ತು... ಕಮಾನ್; ಬೀ ಬ್ಲಿಸ್



ಫುಲ್; ಬೀ ಹ್ಯಾಪಿ... ಬುದ್ದಾಸ್ ಸ್ಮೈಲ್ ಈಸ್ ಸೋ ಪೀಸ್‌ಫುಲ್' ಎಂದು ಅವನನ್ನು ಕರೆದೊಯ್ದು ಸಖತ್ ಕಿಕ್ ಬರುವ ವಿಸ್ಕಿ ಕುಡಿಸಿ, ಆಟೋದಲ್ಲಿ ಕೂರಿಸಿ... 'ನಾಳೆ ಸಿಗುವಾ ಬ್ರದರ್' ಎಂದು ಆತ ಹೊರಟುಹೋಗಿದ್ದ. ಇನ್ನೂ ಅವನ ಕಿವಿಯಲ್ಲಿ ಕತ್ತಲಾದಂತೆ ಆ ರಾತ್ರಿಗಳ ಅಳಲ ಕರೆಯ 'ಅಣ್ಣಾ' ಎಂಬ ದನಿ ಕರುಳ ಎಳೆವಂತೆ ಕೇಳಿಸಲಾರಂಭಿಸಿತು.

ಖಚಿತ, ಈ ರಾತ್ರಿಯ ಜೊತೆಗಿನ ಹೆಂಡತಿಯ ಜಗಳ. ಅವಳು ನನ್ನನ್ನು ಸುಮ್ಮನೆ ಬಿಟ್ಟಾಳೆಯೇ? ನೋಡೋಣ... ಮಿತಿ ಮೀರಿದರೆ ಅವಳ ಕಾಲು ಹಿಡಿದು ರಾಜಿಯಾಗೋಣ ಎಂದು ಧೈರ್ಯ ತಂದುಕೊಂಡ. ಮಗಳು ಕಣ್ಮರೆಯಾದ ದಿನದಿಂದ ಒಂದು ದಿನವೂ ಜಗಳ ತಪ್ಪಿಲ್ಲ... ಅಮಲಿನ ಧೈರ್ಯದಲ್ಲಿ ಹೆಂಡತಿಯನ್ನು ಹೆದರಿಸಬಹುದು ಎಂದಿದ್ದ ಗೆಳೆಯ. ಆದರೆ ಹೆಂಡತಿಯ ಜೊತೆ ಯಾಕೆ ನರಕ... ಹಿಂಸೆ... ಶರಣಾಗತಿಗಿಂತಲೂ ದೊಡ್ಡದು ಇನ್ನೇನಿದೆ... ಶರಣು ಶರಣಾರ್ಥಿ ಎಂದರೆ ಸಾಕಲ್ಲವೇ? ಹಾಗೇ ಮಾಡುವ ಎಂದು ಹಿಂಜರಿಕೆಯಲ್ಲೇ ಮನೆಗೆ ಬಂದ. ಸೂಕ್ಷ್ಮಾತಿಸೂಕ್ಷ್ಮ ಹೆಂಡತಿ ಕುಡಿದು ಬಂದ ಗಂಡನ ವಾಸನೆ ಅರಿತು ವರಾಂಡದಲ್ಲೇ ಕೂರಿಸಿದ್ದಳು. ಒಳಗೆ ಬಂದೆಯೋ ನಿನ್ನ ಪಾಲಿಗೆ ನಾನೆಂದೂ ಇರಲಾರೆ ಎಂದಾಗ ಬೆಪ್ಪನಂತೆ ಯಾವುದೋ ಒಂದು ಮುಳ್ಳುತಂತಿ ಬೇಲಿಗೆ ಸಿಲುಕಿದಂತೆ ಚಡಪಡಿಸಿದ. ಅವನ ಕಿವಿ ತುಂಬ ಮತ್ತದೇ ಗೋಳು... 'ಅಣ್ಣಾ... ಈಗಲಾದರೂ ಬಂದು ಬಿಡಿಸಣ್ಣಾ... ನನ್ನ ಸಾವಿನ ಕೊನೆ ಗಳಿಗೆ ಅಣ್ಣಾ' ಎಂದು ಜೋರಾಗಿ ಗಾಳಿ ಬೀಸಿ